1462 ಅಧಿವೇಶನ
RIR
ನಿ-330
ಕ್ರ-41
ಕುಂತನೂರಿನ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಸುನೀಲ್‌ಗೌಡ ಪಾಟೀಲ್, ಶ್ರೀ ಸಲೀಂ ಅಹಮದ್ , ಶ್ರೀ ಡಿ.ಎಸ್.ಅರುಣ್ ಮತ್ತು ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೊಳಿ ಇವರುಗಳು ನಿಯಮ 330 ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುವ ಬಗ್ಗೆ.**

**ಪ್ರಶ್ನೆ:**

**ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಸಿಬ್ಬಂದಿಗಳ ಗೌರವಧನ ಹೆಚ್ಚಳ ಮಾಡುವ ಹಾಗೂ ಕೇರಳ ಮಾದರಿಯ ಸೌಲಭ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸುವುದು.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ನಅಇ 94 ಎಂಎಲ್ಆರ್ 2010(ಭಾಗ), ದಿನಾಂಕ: 05-01-2011ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರು / ಉಪ ಮಹಾಪೌರರು / ಸದಸ್ಯರುಗಳ ಮಾಸಿಕ ವೇತನವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ:-

| ಕ್ರ. ಸಂ. | ಹುದ್ದೆ | ಪರಿಷ್ಕೃತ ಗೌರವಧನ (ರೂ.ಗಳಲ್ಲಿ) |
|---|---|---|
| 1. | ಮಹಾಪೌರರು | 20,000/- |
| 2. | ಉಪ ಮಹಾಪೌರರು | 15,000/- |
| 3. | ಸದಸ್ಯರು | 7,500/- |

**ಷರತ್ತುಗಳು:**

1. ಗೌರವಧನದ ವೆಚ್ಚವನ್ನು ಆಯಾಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತನ್ನ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು, ಸರ್ಕಾರದಿಂದ ಈ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ;
2. ಮೇಲ್ಕಂಡ ಭತ್ಯೆಗಳನ್ನು ಹೊರತುಪಡಿಸಿ, ಇತರೆ ಭತ್ಯೆಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ಆದೇಶಗಳನ್ವಯ ಭರಿಸತಕ್ಕದ್ದು;
3. ~~ಸ್ಥಾಯಿ ಸಮಿತಿ ಸದಸ್ಯರು, ತಿಂಗಳಲ್ಲಿ ಎರಡು ಮಾಸಿಕ ಸಭೆಯ ಭತ್ಯೆಗೆ ಮಾತ್ರ~~ ಅರ್ಹರಿರುತ್ತಾರೆ;
4. 05 ವರ್ಷಗಳ ಅವಧಿಯವರೆಗೆ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ಸರ್ಕಾರವು ಹೆಚ್ಚಿಸುವುದಿಲ್ಲ. 05 ವರ್ಷಗಳ ನಂತರ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ಹೆಚ್ಚಿಸಬೇಕಾದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಪನ್ಮೂಲಗಳ ಹೆಚ್ಚಳಕ್ಕನುಗುಣವಾಗಿ ಪರಿಶೀಲಿಸಲಾಗುವುದು.

...2..

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ನಅಇ 156 ಎಂಎಲ್‌ಆರ್ 2015, ದಿನಾಂಕ: 05-09-2016ರ ರೀತ್ಯ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರರು/ ಉಪ ಮಹಾಪೌರರು/ ಅಧ್ಯಕ್ಷ/ಉಪಾಧ್ಯಕ್ಷ ಮತ್ತು ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ಈ ಕೆಳಕಂಡಂತೆ ಕೆಳಕಂಡ ಷರತ್ತಿಗೊಳಪಟ್ಟು ಪರಿಷ್ಕರಿಸಿ ಆದೇಶಿಸಿದೆ:-

| ಕ್ರ ಸಂ | ಹುದ್ದೆ | ಪರಿಷ್ಕೃತ ಗೌರವಧನ (ರೂ. ಗಳಲ್ಲಿ) |
|---|---|---|
| | **ಮಹಾನಗರಪಾಲಿಕೆ** | |
| 1. | ಮಹಾಪೌರರು | 16,000/- |
| 2. | ಉಪ ಮಹಾಪೌರರು | 10,000/- |
| 3. | ಸದಸ್ಯರು | 6,000/- |
| 4. | ಸ್ಥಾಯಿ ಸಮಿತಿ ಸದಸ್ಯರು | 400/-<br>(ಮಾಸಿಕ ರೂ. 800-00 ಮೀರದಂತೆ) |
| | **ನಗರಸಭೆಗಳು** | |
| 1. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 12,000/- |
| 2. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 8,000/- |
| 3. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 4,000/- |
| 4. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 8,000/- |
| 5. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 4,000/- |
| 6. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 2,000/- |
| 7. | ಸ್ಥಾಯಿ ಸಮಿತಿ ಸದಸ್ಯರು | 400/-<br>(ಮಾಸಿಕ ರೂ.800-00 ಮೀರದಂತೆ) |
| | **ಪುರಸಭೆಗಳು** | |
| 1. | ಅಧ್ಯಕ್ಷರು | 4,800/- |
| 2. | ಉಪಾಧ್ಯಕ್ಷರು | 2,400/- |
| 3. | ಸದಸ್ಯರು | 1,200/- |
| 4. | ಸ್ಥಾಯಿ ಸಮಿತಿ ಸದಸ್ಯರು | 300/-<br>(ಮಾಸಿಕ ರೂ.600-00 ಮೀರದಂತೆ) |
| | **ಪಟ್ಟಣ ಪಂಚಾಯಿತಿ** | |
| 1. | ಅಧ್ಯಕ್ಷರು | 3,200/- |
| 2. | ಉಪಾಧ್ಯಕ್ಷರು | 1,600/- |
| 3. | ಸದಸ್ಯರು | 800/- |
| 4. | ಸ್ಥಾಯಿ ಸಮಿತಿ ಸದಸ್ಯರು | 200/-<br>(ಮಾಸಿಕ ರೂ.400-00 ಮೀರದಂತೆ) |

...3..

**ಷರತ್ತುಗಳು:**

(1) ಈ ಗೌರವಧನದ ವೆಚ್ಚವನ್ನು ಆಯಾಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು, ಸರ್ಕಾರದಿಂದ ಈ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ;

(2) ಸ್ಥಾಯಿ ಸಮಿತಿ ಸದಸ್ಯರು, ಪ್ರತಿ ತಿಂಗಳಿಗೆ ಗರಿಷ್ಠ ಎರಡು ಸಭೆಯ ಭತ್ಯೆಗೆ ಮಾತ್ರ ಅರ್ಹರಿರುತ್ತಾರೆ;

(3) ಮುಂದಿನ ಐದು ವರ್ಷದವರೆಗೆ ಗೌರವಧನವನ್ನು / ಭತ್ಯೆಗಳನ್ನು ಹೆಚ್ಚಿಸುವ ಅಥವಾ ಪರಿಷ್ಕರಿಸುವ ಬಗ್ಗೆ ಪರಿಗಣಿಸುವಂತಿಲ್ಲ.

ಗೌರವಧನ ಹೆಚ್ಚಳ ಮಾಡುವ ಬಗ್ಗೆ ಪರಿಶೀಲಿಸಲಾಗಿ, ಸರ್ಕಾರದ ದಿನಾಂಕ 15-09-2016ರ ಆದೇಶದನ್ವಯ ಹಾಲಿ ಗೌರವಧನ ಪಾವತಿಸುತ್ತಿರುವ ಅವಧಿಯು 5 ವರ್ಷ ಪೂರ್ಣಗೊಂಡಿದ್ದು, ಈ ಗೌರವಧನವನ್ನು ಪರಿಷ್ಕರಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು ಹಾಗೂ ಪ್ರಸ್ತುತ ಕೇರಳ ಮಾದರಿಯ ಸೌಲಭ್ಯಗಳನ್ನು ಒದಗಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 116 ಜಿಪಸ 2017, ದಿನಾಂಕ: 03-05-2017ರನ್ವಯ ಪ್ರಸ್ತುತ ಕೆಳಕಂಡ ಕೋಷ್ಟಕದನ್ವಯ ಮಾಹೆಯಾನ ಗೌರವಧನವನ್ನು ನೀಡಲಾಗುತ್ತಿದೆ.

| ಕ್ರ. ಸಂ | ಹುದ್ದೆ | ಗ್ರಾಮ ಪಂಚಾಯತಿ (ರೂ.ಗಳಲ್ಲಿ) | ತಾಲ್ಲೂಕು ಪಂಚಾಯತಿ (ರೂ.ಗಳಲ್ಲಿ) | ಜಿಲ್ಲಾ ಪಂಚಾಯತಿ (ರೂ.ಗಳಲ್ಲಿ) |
|---|---|---|---|---|
| 1 | ಅಧ್ಯಕ್ಷರು | 3000 | 6000 | 35000 |
| 2 | ಉಪಾಧ್ಯಕ್ಷರು | 2000 | 4000 | 15000 |
| 3 | ಸದಸ್ಯರು | 1000 | 3000 | 5000 |

ಕಡತ ಸಂಖ್ಯೆ: ಗ್ರಾಅಪಂರಾ 298 ಜಿಪಸ 2021 ರಲ್ಲಿ ದಿನಾಂಕ:15.11.2021 ರಂದು ಗ್ರಾಮ ಪಂಚಾಯತಿ ಸದಸ್ಯರ ಗೌರವಧನವನ್ನು ಹೆಚ್ಚಿಸುವ ಕುರಿತು ಸರ್ಕಾರದಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 549 ವೆಚ್ಚ 6/2021 ದಿನಾಂಕ: 29.11.2021 ರಲ್ಲಿ ಪ್ರಸ್ತುತ ಹೆಚ್ಚುವರಿ ಹಣಕಾಸು ಕಾರ್ಯಭಾರವನ್ನು ಭರಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ.

ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಗ್ರಾಮ ಪಂಚಾಯಿತಿ ಕೆಲಸಗಳ ನಿಮಿತ್ತ ಗ್ರಾಮ ಪಂಚಾಯಿತಿ ಪರಿಮಿತಿಗಳಾಚೆ ಮಾಡಿದ ಪ್ರಯಾಣಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ) ನಿಯಮಗಳು, 1994ರನ್ವಯ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ಪಡೆಯಲು ಈಗಾಗಲೇ ಅವಕಾಶ ಕಲ್ಪಿಸಲಾಗಿದೆ.

ರಾಜ್ಯದ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಿಮಾ ಸೌಲಭ್ಯ / ಆರೋಗ್ಯ ಕಾರ್ಡ್ ಹಾಗೂ ಕೇರಳ ಮಾದರಿಯ ಸೌಲಭ್ಯಗಳನ್ನು ನೀಡುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

---

ಸಂಖ್ಯೆ: ನಅಇ 38 ಬಿಬಿಎಸ್ 2022(ಇ)

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ